2) ಹಾಗಿದ್ದಲ್ಲಿ ಯಾವುದಾದರೂ ಪ್ರಕರಣದಲ್ಲಿ : ಶಿಕ್ಷೆಯಾಗಿದೆಯೇ?

1) ಜೈಲು ಶಿಕ್ಷೆ

2) ದಂಡ

ಶ್ರೀ ಬಸವರಾಜ್ ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರು) :

1) ಪರಿಸರ ಮಾಲಿನ್ಯದ ಕಾನೂನಿನ ಉಲ್ಲಂಘನೆ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಒಟ್ಟು ಪ್ರಕರಣ ಸಂಖ್ಯೆ : 157.

ಅ) ಜಲ ಮಾಲಿನ್ಯ ನಿಯಂತ್ರಣ ಕಾಯಿದೆಯ ಅಡಿಯಲ್ಲಿ ಹೂಡಲಾದ ಪ್ರಕರಣಗಳ ಸಂಖ್ಯೆ : 107

ಆ) ವಾಯುಮಾಲಿನ್ಯ ನಿಯಂತ್ರಣ ಕಾಯಿದೆಯ ಅಡಿಯಲ್ಲಿ ಹೂಡಲಾದ ಒಟ್ಟು ಪ್ರಕರಣಗಳ ಸಂಖ್ಯೆ : 50

2) ಹೌದು

ಇಲ್ಲ.

ಅ) ಮಾನ್ಯ ಸಿ. ಎಂ. ಎಂ. ನ್ಯಾಯಾಲಯ, ಬೆಂಗಳೂರಿನಲ್ಲಿ ಲೈಮ್ ಕಿಲ್ನ, ಬೆಂಗಳೂರು ಇದರ ವಿರುದ್ಧ ಹೂಡಲಾದ ಸಿ.ಸಿ. ಸಂಖ್ಯೆ : 2022-92 ರ ಪ್ರಕರಣದಲ್ಲಿ ದಿನಾಂಕ : 12.2.93 ರ ಪ್ರಕರಣದಲ್ಲಿ ದಿನಾಂಕ : 12-2-93 ರಂದು ಹೊರಡಿಸಿದ ಆದೇಶದಲ್ಲಿ ಶಿಕ್ಷೆಯಾಗಿದ್ದು ಮಾನ್ಯ ನ್ಯಾಯಾಲಯವು ಅಪರಾಧಿಗೆ ರೂ. 1000.00 ದಂಡವನ್ನು ವಿಧಿಸಿರುತ್ತದೆ.

ಆ) ಮಾನ್ಯ ಜೆ. ಎಂ. ಎಫ್.ಸಿ. ನ್ಯಾಯಾಲಯದಲ್ಲಿ (ಕೊಪ್ಪಳ) ಮುನಿರಾಬಾದ್ ಕೆಮಿಕಲ್ಸ್ ಕಂ. ಇದರ ವಿರುದ್ಧ ಹೂಡಲಾಗಿರುವ ಕ್ರಿಮಿನಲ್ ಪ್ರಕರಣದ ಸಂಖ್ಯೆ : ಸಿ.ಸಿ. 117-89 ಕ್ಕೆ ದಿನಾಂಕ 30. 12. 93 ರಲ್ಲಿ ಶಿಕ್ಷೆಯಾಗಿ ಆರೋಪಿಗೆ ರೂ. 1000.00 ದಂಡವನ್ನು ವಿಧಿಸಲಾಗಿದೆ.

ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದಿರುವ ಆಸ್ಪತ್ರೆಗಳು

433 (667) ಶ್ರೀ ಎಸ್. ಪಿ. ಮುದ್ದು ಹನುಮೇಗೌಡ (ಕುಣಿಗಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದೆ ಇರುವ ಆಸ್ಪತ್ರೆಗಳು ಎಷ್ಟು?

2) ತುಮಕೂರು ಜಿಲ್ಲಾ ಹಾಗೂ ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಈ ಸಂಖ್ಯೆ ಎಷ್ಟು?

3) ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?